ಪ್ರಕಟವಾಗಬಹುದು ಅಂದುಕೊಂಡೆ, ಏನೂ ಆಗಲಿಲ್ಲ. ನನಗೀಗ ಮೂವತ್ತು ವರ್ಷ, ಏನನ್ನಾದರೂ ಪ್ರಕಟಿಸುವ ಸಾಧ್ಯತೆಯೂ ಇಲ್ಲ. ಆಗ ಮುಗಿಸದೆ ಬಿಟ್ಟ ಇನ್ನೂರೈವತ್ತು ಪುಟಗಳ ರಾಜಕೀಯ ಕಾದಂಬರಿ ಈಗಲೂ ನನ್ನ ಮೇಜಿನ ಯಾವುದೋ ಡ್ರಾಯರ್‌ನಲ್ಲಿರಬೇಕು.

ಮಿಲಿಟರಿ ದಂಗೆಯಾಗುತ್ತಿದ್ದ ಹಾಗೆ ಖಿನ್ನನಾಗಬಾರದು ಎಂದುಕೊಂಡು ನನ್ನ ಮೂರನೆಯ ಪುಸ್ತಕ ಬರೆಯಲು ಶುರುಮಾಡಿದೆ. ಅದು ಆಗಲೇ ನೀವು ಹೇಳಿದ 'ದ ಸೈಲೆಂಟ್ ಹೌಸ್' ಪುಸ್ತಕ. 1982ರಲ್ಲಿ ಮೊದಲನೆಯ ಪುಸ್ತಕ ಕಡೆಗೂ ಪ್ರಕಟವಾದಾಗ ಈ ಪುಸ್ತಕ ಬರೆಯುತ್ತಿದ್ದೆ. ಹಾಗಾಗಿ ನಾನು ಬರೆದ ಮೂರನೆಯ ಪುಸ್ತಕ ಎರಡನೆಯ ಪುಸ್ತಕವಾಗಿ ಪ್ರಕಟವಾಯಿತು.

◆ ಮಿಲಿಟರಿ ಆಡಳಿತದಲ್ಲಿ ನಿಮ್ಮ ಕಾದಂಬರಿ ಯಾಕೆ ಪ್ರಕಟವಾಗಲಿಲ್ಲ?

ಅದರಲ್ಲಿನ ಪಾತ್ರಗಳು ಮೇಲ್ವರ್ಗದ ಮಾರ್ಕ್ಸ್‌ವಾದಿ ಯುವಕರು. ಅವರಪ್ಪ ಅಮ್ಮಂದಿರು ಬೇಸಿಗೆಯಲ್ಲಿ ರೆಸಾರ್ಟ್‌ಗಳಿಗೆ ಹೋಗುತ್ತಿದ್ದರು. ದೊಡ್ಡ ಮನೆಗಳಲ್ಲಿದ್ದುಕೊಂಡು ಮಾರ್ಕ್ಸ್‌ವಾದಿಗಳಾಗಿದ್ದರು. ಪರಸ್ಪರರು ಕಿತ್ತಾಡುತ್ತಾ, ಪರಸ್ಪರರ ಬಗ್ಗೆ ಹೊಟ್ಟೆಕಿಚ್ಚು ಪಡುತ್ತಿದ್ದರು. ಕಾದಂಬರಿಯ ಎಳೆ ಪ್ರಧಾನಮಂತ್ರಿಯ ಹತ್ಯೆ.

◆ ನಿಮ್ಮ ಐಡಿಯಾಗಳ ಕುರಿತು ಪ್ರಯೋಗಶೀಲರಾಗಿದ್ದಾಗ ನಿಮ್ಮ ಕಾದಂಬರಿಯ ಸ್ವರೂಪವನ್ನು ಹೇಗೆ ಆಯ್ಕೆ ಮಾಡಿಕೊಳ್ಳುವಿರಿ? ಒಂದು ಪ್ರತಿಮೆಯೊಂದಿಗೋ ಒಂದು ಸಾಲಿನೊಂದಿಗೋ ಆರಂಭಿಸುವಿರಾ?

ಆ ತರಹದ ಯಾವುದೇ ನಿರ್ದಿಷ್ಟ ಫಾರ್ಮುಲಾ ಇಲ್ಲ. ಆದರೆ, ಎರಡು ಕಾದಂಬರಿಗಳನ್ನು ಒಟ್ಟಿಗೆ ಬರೆಯುವುದಿಲ್ಲ. ಪ್ರತಿ ಬಾರಿ ಎಲ್ಲವನ್ನೂ ಬದಲಿಸಲು ಪ್ರಯತ್ನಿಸುತ್ತೇನೆ. ಅದಕ್ಕೆ ನನ್ನ ಹಲವು ಓದುಗರು ನಿಮ್ಮ ಈ ಕಾದಂಬರಿ ಇಷ್ಟವಾಯಿತು, ನೀವು ಈ ತರಹದ ಕಾದಂಬರಿ ಬರೆಯಲಿಲ್ಲವಲ್ಲ, ನೀವು ಈ ಕಾದಂಬರಿ ಬರೆಯುವವರೆಗೂ ಹಿಂದಿನ ನಿಮ್ಮ ಕಾದಂಬರಿಗಳು ನನಗೆ ಇಷ್ಟವಾಗಿರಲಿಲ್ಲ ಅಂತೆಲ್ಲ ಹೇಳುತ್ತಾರೆ. 'ದ ಬ್ಲಾಕ್ ಬುಕ್' ಪುಸ್ತಕದ ಬಗ್ಗೆ ಈ ತರಹದ ಮಾತುಗಳನ್ನು ಹೆಚ್ಚಾಗಿ ಕೇಳಿದ್ದೇನೆ. ನನಗೆ ಈ ತರಹದ ಮಾತುಗಳು ಇಷ್ಟವಾಗುವುದಿಲ್ಲ. ರೂಪ, ಶೈಲಿ, ಭಾಷೆ, ಮೂಡ್, ವ್ಯಕ್ತಿತ್ವ ಇವುಗಳ ಬಗೆಗೆ ಪ್ರಯೋಗ ಮಾಡುವುದು ಪ್ರತಿ ಪುಸ್ತಕದ ಬಗ್ಗೆ ವಿಭಿನ್ನವಾಗಿ ಯೋಚಿಸುವುದೊಂದು ಸವಾಲು. ಅದು ಖುಷಿ ಕೊಡುತ್ತದೆ.

ಪುಸ್ತಕದ ವಸ್ತು ಬೇರೆ ಬೇರೆ ಮೂಲಗಳಿಂದ ನನಗೆ ಸಿಗಬಹುದು. 'ಮೈ ನೇಮ್ ಇಸ್ ರೆಡ್' ಕಾದಂಬರಿಯಲ್ಲಿ ಚಿತ್ರಕಾರನಾಗಬೇಕೆಂದಿದ್ದ ನನ್ನ ಮಹತ್ವಾಕಾಂಕ್ಷೆಯ ಕುರಿತು ಬರೆಯಬೇಕೆಂದಿದ್ದೆ. ಮೊದಲು ಒಬ್ಬ ಚಿತ್ರಕಾರನ ಕುರಿತು ಬರೆಯಲು ಶುರುಮಾಡಿದೆ. ಆಮೇಲೆ ಆ ಚಿತ್ರಕಾರ ಹಲವು ಚಿತ್ರಕಾರರೊಂದಿಗೆ ಕೆಲಸ ಮಾಡುತ್ತಿರುವಂತೆ ಮಾಡಿದೆ. ಆಗ ದೃಷ್ಟಿಕೋನವೇ ಬದಲಾಯಿತು. ಯಾಕೆಂದರೆ, ಅಲ್ಲಿ ಚಿತ್ರಕಾರರು ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದರು. ಮೊದಲಿಗೆ ಸಮಕಾಲೀನ ಚಿತ್ರಕಾರನ ಕುರಿತು ಬರೆಯಬೇಕೆಂದುಕೊಂಡೆ. ಆಮೇಲೆ ಟರ್ಕಿಶ್ ಚಿತ್ರಕಾರನ ಬಗ್ಗೆಯೇ ಬರೆಯೋದು ಪಾಶ್ಚಾತ್ಯ ಪ್ರಭಾವದಿಂದ ಬರೆದಂತೆ ಅನ್ನಿಸಿಬಿಡಬಹುದು. ಹಾಗಾಗಿ ಚಿಕಣಿ ಚಿತ್ರಕಾರರ (ಮಿನಿಯೇಚರಿಸ್ಟ್) ಬಗ್ಗೆ ಬರೆಯಲು ಶುರುಮಾಡಿದೆ. ಹೀಗೆ ನನ್ನ ಕಾದಂಬರಿಯ ವಸ್ತು ಸಿಕ್ಕಿತು.

ಕೆಲವು ವಸ್ತುಗಳೇ ಹೊಸ ಸ್ವರೂಪದ ಅನ್ವೇಷಣೆ ಅಥವಾ ಕತೆ ಹೇಳುವ ತಂತ್ರಗಾರಿಕೆಯ ಅವಶ್ಯಕತೆಯನ್ನು ಸೃಷ್ಟಿಸುತ್ತವೆ. ಉದಾಹರಣೆಗೆ ನೀವು ಏನನ್ನೋ ನೋಡಿ ಅಥವಾ ಓದಿ ಅಥವಾ